**ದಿನಾಂಕ 19.10.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಜೆ.ಎ. ವಕೀಲರಿಂದಃ**

1. ನಾವು ಬೇರೆಯಾಗಿದ್ದೇವೆ ಎಂದು ತೋರಿಸಲು ರೆವೆನ್ಯೂ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ, ಪಾಲು ವಿಭಾಗ ಪತ್ರ ಇವೆ ಪಾಲು ವಿಭಾಗ ಪತ್ರ ಅಲ್ಲದೆ ರೆವೆನ್ಯೂ ದಾಖಲಾತಿಗಳು ಯಾವುದೂ ಇಲ್ಲ ಎಲ್ಲಾ ರೆವೆನ್ಯೂ ದಾಖಲಾತಿಗಳು ಇನ್ನು ನನ್ನ ತಂದೆಯ ಹೆಸರಿನಲ್ಲಿ ಇದೆ. ದಾವಾ ಆಸ್ತಿಗಳು ಎಲ್ಲವೂ ಸಹ ನಮ್ಮ ತಂದೆಯ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಇವೆ ಎಂದರೆ ಸರಿ. ಸರ್ವೆ ನಂ. 32/14 ನಮ್ಮ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಧನರಾಜು, ನಾಗರಾಜು ಮತ್ತು ನಮ್ಮ ತಾಯಿಯವರ ಹೆಸರಿನಲ್ಲಿ ಜಂಟಿಯಾಗಿದೆ ಎಂದು ನುಡಿಯುತ್ತಾರೆ.

2. ಸರ್ವೆ ನಂ. 32/14 ರ ಜಮೀನು ಸಿದ್ದಪ್ಪ ಮತ್ತು ರಂಗಯ್ಯನವರ ಭಾಗಕ್ಕೆ ಹೋಗಿದೆ. 1990 ನೇ ಸಾಲಿನಲ್ಲಿ ವಿಭಾಗವಾಗಿದೆ. ವಿಭಾಗ ಮಾಡುವ 4-5 ದಿನಗಳ ಹಿಂದೆ ನಮ್ಮ ಊರಿನ ಪಂಚಾಯತಿಯಲ್ಲಿ ಪಾಲುಪಟ್ಟಿ ಮಾಡುವತೀರ್ಮಾನ ತೆಗೆದುಕೊಂಡಿದ್ದೇವೆ. ಪಂಚಾಯತಿದಾರರಾಗಿ ನಾಗರಾಜಪ್ಪ, ತಮ್ಮೇಗೌಡರು, ನನ್ನ ತಾಯಿ ಮತ್ತು ತಂದೆ ಹಾಗೂ ಐದು ಜನ ಅಣ್ಣತಮ್ಮಂದಿರು ಸಹ ಇದ್ದರು. ಮಾತುಕತೆಯಾದ ದಿನ ಯಾವುದೇ ಕಚ್ಚಾ ದಾಖಲಾತಿಯನ್ನು ಬರೆದುಕೊಂಡಿಲ್ಲ. ಒಂದೇ ಸ್ಟಾಂಪ್ ಪೇಪರ್ ನ್ನು ತಂದಿರುತ್ತೇವೆ. ಸದರಿ ಸ್ಟಾಂಪ್ ಪತ್ರವನ್ನು ನಮ್ಮ ತಂದೆಯ ಹೆಸರಿಗೆ ತಂದಿರುತ್ತೇವೆ ಸ್ಟಾಂಪ್ ಪತ್ರವನ್ನು ತರಲು ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಸ್ಟಾಂಪ್ ಪತ್ರವನ್ನು ಯಾವ ದಿನಾಂಕದಂದು ಖರೀದಿ ಮಾಡಲಾಗಿದೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸ್ಟಾಂಪ್ ಪತ್ರ ಯಾವಾಗ ತಂದಿದ್ದೇವೆ ಎಂಬ ಮಾಹಿತಿಯನ್ನು ನಮ್ಮ ವಕೀಲರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಕೀಲರಿಗೂ ಸಹ ಪಾಲುಪಟ್ಟಿಯನ್ನು ತೋರಿಸಿದ್ದೇನೆ. ಪಾಲುಪಟ್ಟಿಯ ಮೂಲ ಪ್ರತಿ ನನ್ನ ಬಳಿ ಇದೆ ಅದನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

3. ಪಂಚಾಯತಿದಾರರು ಪತ್ರವನ್ನು ಯಾರ ಬಳಿ ಇಟ್ಟುಕೊಳ್ಳಬೇಕು ಎಂದು ತೀರ್ಮಾನ ಮಾಡಲಾಗಿದೆ ಎಂದರೆ ಎಲ್ಲರಿಗೂ ಅದರ ನಕಲನ್ನು ಕೊಟ್ಟಿರುತ್ತಾರೆ, ತಂದೆ ತಾಯಿಯ ಜೊತೆ ನಾನು ಇದ್ದ ಕಾರಣ ಅಸಲು ಪತ್ರ ನನ್ನ ಬಳಿ ಇರುತ್ತದೆ ಪಂಚಾಯತಿಯವರು ಪತ್ರವನ್ನು ಇಟ್ಟುಕೊಳ್ಳಲು ನಾನೇ ಇಟ್ಟುಕೊಳ್ಳಲು ತೀರ್ಮಾನ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ತಂದೆ ತಾಯಿಯ ಜವಾಬ್ದಾರಿ ಹೊತ್ತ ಕಾರಣ ಅಸಲು ಪತ್ರವನ್ನು ನಾನು ಇಟ್ಟುಕೊಂಡಿರುತ್ತೇನೆ.

4. ಸದರಿ ಪತ್ರವನ್ನು ಕಾಂತವೀರಯ್ಯನವರು ಬರೆದಿರುತ್ತಾರೆ. ದಿನಾಂಕ 13/17.07.1990 ರಂದು ಪತ್ರ ಬರೆಯಲಾಯಿತು. ಎಷ್ಟು ಗಂಟೆಗೆ ಪತ್ರ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ನಾನು ಸಮಯ ನೋಡಿಕೊಂಡಿರುವುದಿಲ್ಲ. ಪಂಚಾಯತಿಯಲ್ಲಿ ಐದು ಜನ ಇದ್ದರು ಅವರು ಸಹಿ ಮಾಡಿರುತ್ತಾರೆ. ನಮ್ಮ ಪೈಕಿ ತಿಮ್ಮಪ್ಪನವರು ಹೆಬ್ಬೆಟ್ಟು ಹಾಕಿದ್ದು ಉಳಿದವರೆಲ್ಲರೂ ಸಹ ಸಹಿ ಮಾಡಿರುತ್ತೇವೆ. ಸಿದ್ದಪ್ಪನವರು ಎಂದಿಗೂ ಇಂಗ್ಲೀಷ್ ನಲ್ಲಿ ಸಹಿ ಮಾಡುವುದಿಲ್ಲ ಎಂದರೆ ಸಾಕ್ಷಿಯು ಅವರು ಇಂಗ್ಲೀಷ್ ಮತ್ತು ಕನ್ನಡ ಎರಡರಲ್ಲೂ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ನಿ.ಪಿ.62(ಡಿ) ದಾಖಲಾತಿಯನ್ನು ತೋರಿಸಿ ಸದರಿ ದಾಖಲಾತಿಯಲ್ಲಿ ವಾದಿಯು ಕನ್ನಡದಲ್ಲಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ಹಾಜರುಪಡಿಸಿರುವ ದಾಖಲಾತಿಯಲ್ಲಿ ಅವರು ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಎಲ್ಲಾ ಬ್ಯಾಂಕ್ ವ್ಯವಹಾರಗಳು ಕನ್ನಡದಲ್ಲಿ ಸಹಿ ಇವೆ ಎಂದರೆ ಸಾಕ್ಷಿಯು ಮೊದಲು ಆ ರೀತಿ ಮಾಡುತ್ತಿದ್ದರು ನಂತರ ಇಂಗ್ಲೀಷ್ ನಲ್ಲಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 4 ನೇ ಪ್ರತಿವಾದಿ ಬಸವರಾಜು ರವರು ಸದರಿ ಪಾಲುಪಟ್ಟಿಯನ್ನು ಸುಳ್ಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

6. ಸದರಿ ಪಾಲುಪಟ್ಟಿಯನ್ನು ಮಾಡಿಸಿದ ನಂತರ ಖಾತೆ ಪಹಣಿಯನ್ನು ಮಾಡಿಸಿಕೊಳ್ಳಲು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಇನ್ನು ಜಂಟಿ ಇರುವ ಕಾರಣ ಕೊಟ್ಟಿಲ್ಲ ಎಂದು

ನುಡಿಯುತ್ತಾರೆ. ನಾವು ಯಾವುದೇ ಜಮೀನಿಗೆ ಇದುವರೆಗೂ ಕಂದಾಯ ಕಟ್ಟಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ದಾವೆ ಹಾಕಿದ ನಂತರ ಕಂದಾಯ ಕಟ್ಟಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ದಾವೆ ಹಾಕುವ ಮೊದಲು ಕಂದಾಯ ಕಟ್ಟಿದ್ದೀರಾ ಎಂದರೆ ಸಾಕ್ಷಿಯು ಭಾಗದ ಪ್ರಕಾರ ಯಾರು ಕಟ್ಟಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಮನೆಯಲ್ಲಿ ಯಾರು ಯಜಮಾನಿಕೆ ಮಾಡುತ್ತಾರೋ ಅವರ ಹೆಸರಿಗೆ ಜಮೀನು ಖರೀದಿ ಮಾಡುವ ರೂಢಿ ಇದೆ ಎಂದರೆ ಸರಿಯಲ್ಲ.

7. ನಾನು ಮತ್ತು 4 ನೇ ಪ್ರತಿವಾದಿ ಬಸವರಾಜು ಹೆಚ್ಚು ಬುದ್ಧಿವಂತರಾಗಿದ್ದು ಎಲ್ಲಾ ಆಸ್ತಿಗಳನ್ನು ನಮ್ಮ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿ.ಡಿ.61 ಒಪ್ಪಿಗೆ ಪತ್ರವನ್ನು ಯಾವ ಉದ್ದೇಶಕ್ಕಾಗಿ ಬರೆದಿದ್ದೀರಾ ಎಂದರೆ ಸಾಕ್ಷಿಯು ಮನೆಯು 30*23 ಅಡಿ ಬಸವರಾಜು ಮತ್ತು ಲಕ್ಷ್ಮಯ್ಯನವರಿಗೆ ಬಂದಿದ್ದು ಸದರಿ ಮನೆಯನ್ನು ರಿಪೇರಿ ಮಾಡಿಸಬೇಕಾದ ಕಾರಣದಿಂದ ಒಪ್ಪಿಗೆ ಪತ್ರವನ್ನು ಬರೆಸಲಾಯಿತು. ಸದರಿ ಸ್ವತ್ತು ವಿಭಾಗ ಪತ್ರದಲ್ಲಿ ಸೇರಿಸಲಾಗಿದೆ. ನಾನು ಹೇಳಿದಂತೆ ವಿಭಾಗ ಪತ್ರ ಈಗಾಗಲೇ ಆಗಿದ್ದ ಕಾರಣ ಒಪ್ಪಿಗೆ ಪತ್ರ ಮಾಡಿಸುವ ಅವಶ್ಯಕತೆ ಏನು ಇತ್ತು ಎಂದರೆ ಸಾಕ್ಷಿಯು ನನ್ನ ತಾಯಿಯ ಸಹಿ ಬೇಕಿತ್ತು ಮತ್ತು ಐದು ಭಾಗ ಜಂಟಿಯಾಗಿದ್ದ ಕಾರಣ ಒಪ್ಪಿಗೆ ಪತ್ರ ಮಾಡಿಸಿದ್ದೇವೆ ಎಂದು ನುಡಿಯುತ್ತಾರೆ.

8. ಒಪ್ಪಿಗೆ ಪತ್ರಕ್ಕೆ ರಂಗಣ್ಣ ಈರಪ್ಪ, ತಿಪ್ಪೇಸ್ವಾಮಿ ಸಾಕ್ಷಿದಾರರಾಗಿ ಹಾಗೂ ನಾನು ಮತ್ತು ನನ್ನ ಅಣ್ಣ ತೀರಿ ಹೋದ ಕಾರಣ ನನ್ನ ಅತ್ತಿಗೆ ಸರಸ್ವತ್ತಮ್ಮ ಸಹಿ ಮಾಡಿರುತ್ತೇವೆ. ಸರ್ವೆ ನಂ. 81/3 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ 4 ಗುಂಟೆ ವಿಸ್ತೀರ್ಣ ಇದೆ ಅದರಲ್ಲಿ 5 ಜನರಿಗೆ ಭಾಗ ಇದೆ. ಸರ್ವೆ ನಂ. 81/3 ರಲ್ಲಿ ನಮ್ಮ ತಂದೆಯವರಿಗೆ 23*30 ಅಡಿ ಹಾಗೂ ಉಳಿದವರಿಗೆ 20*30 ಅಡಿ ಭಾಗ ಬಂದಿದೆ ಹಾಗೂ ಮೇಲಿನಿಂದ ಓಡಾಡಲು ದಾರಿಯನ್ನು ಸಹ ಬಿಡಲಾಗಿದೆ.

9. ಬಸವರಾಜು ಹೆಂಡತಿ ಸರಸ್ವತಿ ಮತ್ತು ಲಕ್ಷ್ಮಯ್ಯ ಇವರು ನನ್ನ ಪರವಾಗಿ ಇರುವ ಕಾರಣ ನನ್ನ ಅನುಕೂಲಕ್ಕೆ ತಕ್ಕಂತೆ ಒಪ್ಪಿಗೆ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಅವರ ನ್ಯಾಯ ಬೆಲೆ ಅಂಗಡಿಯನ್ನು ಸರಸ್ವತಮ್ಮನವರ ಪರವಾಗಿ ನಡೆಸುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಸರಸ್ವತಮ್ಮನವರ ನಡುವೆ ಹಣಕಾಸು ವ್ಯವಹಾರ ಇರುವ ಕಾರಣ ನಾನು ಹೇಳಿದಂತೆ ಸದರಿ ದಾಖಲಾತಿಗೆ ಸಹಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಉಳಿದ ಸಹೋದರರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ. ನನ್ನ ತಾಯಿಗೆ ಓದು ಬರಹ ಇಲ್ಲ. ಒಪ್ಪಿಗೆ ಪತ್ರದ ಸ್ಟಾಂಪ್ ಪೇಪರ್ ನ್ನು ನನ್ನ ತಾಯಿಯ ಹೆಸರಿಗೆ ಬರೆಯಲಾಗಿದೆ ಎಂದರೆ ಸರಿ.

10. ಸದರಿ ಒಪ್ಪಿಗೆ ಪತ್ರ ಬರೆಯುವ ಸಮಯದಲ್ಲಿ ಅದು ನಮ್ಮ ಭಾಗಕ್ಕೆ ಬಂದಿದ್ದು ನಮ್ಮ ತಾಯಿಯವರನ್ನೂ ಸಹ ಕೇಳಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಾಯಿ ಈಗಲೂ ನಮ್ಮ ಜೊತೆಯಲ್ಲಿ ಇದ್ದು ಅವರಿಗೆ 101 ವರ್ಷ ಹಾಗೂ ಅವರಿಗೆ ಓಡಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ತುಂಬ ವಯಸ್ಸಾದ ಕಾರಣ ಅವರಿಗೆ ಕಣ್ಣು ಮತ್ತು ಕಿವಿ ಸರಿಯಾಗಿ ಇಲ್ಲದ ಕಾರಣ ಅದನ್ನು ದುರುಪಯೋಗ ಪಡಿಸಿಕೊಂಡು ನನಗೆ ಬೇಕಾದಂತೆ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವಿಭಾಗ ಆಗದಿದ್ದರೂ ಸಹ ನಿ.ಡಿ.61 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

11. ಸಾಕ್ಷಿಗೆ ಛಾಯಾ ಚಿತ್ರಗಳನ್ನು ತೋರಿಸಲಾಗಿ ಸದರಿ ಛಾಯಾ ಚಿತ್ರದಲ್ಲಿ ಇರುವ ಭಾವಿ ನಮ್ಮ ಜಮೀನಿಗೆ ಸಂಬಂಧಿಸಿದ ಭಾವಿಗಳು ಎಂದರೆ ಸಾಕ್ಷಿಯು ಸದರಿ ಛಾಯಾ ಚಿತ್ರಗಳನ್ನು ನೋಡಿ ಅದು ನಮ್ಮ ತೋಟದ ಛಾಯಾ ಚಿತ್ರ ಎಂದು ಗುರುತಿಸಿರುತ್ತಾರೆ , **7 ಛಾಯಾ ಚಿತ್ರಗಳನ್ನು ನಿ.ಪಿ.25 ರಿಂದ 32 ಎಂದು ಗುರುತಿಸಲಾಯಿತು ಹಾಗೂ ಒಂದು ಸಿ.ಡಿ. ಯನ್ನು ನಿ.ಪಿ. 33** ಎಂದು ಗುರುತಿಸಲಾಯಿತು.

12. ನನ್ನ ತಂದೆ ತೀರಿಕೊಂಡ ನಂತರ ಖಾತೆ ಬದಲಾವಣೆಗೆ ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನಾನು ವಂಶವೃಕ್ಷವನ್ನು ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಜಂಟಿ

ಸ್ವಾಧೀನದಲ್ಲಿ ಇರುವ ಕಾರಣ ನಾವು ಖಾತೆ ಪಹಣಿಯನ್ನು ಮಾಡಿಸಿಕೊಳ್ಳಲು ಅರ್ಜಿಯನ್ನು ಕೊಟ್ಟಿಲ್ಲ. ದಾವಾ ಜಮೀನನ್ನು ದುರಸ್ತು ಮಾಡಲು ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಜಂಟಿ ಸ್ವಾಧೀನದಲ್ಲಿ ಇದ್ದ ಕಾರಣ ನಮ್ಮ ಹೆಸರಿಗೆ ಜಮೀನು ಆಗದೇ ಇರುವ ಕಾರಣ ದುರಸ್ತು ಮಾಡಲು ಹೇಗೆ ಸಾಧ್ಯ ಎಂದು ನುಡಿಯುತ್ತಾರೆ.

13. ನನ್ನ ಹೆಸರಿಗೆ ಸರ್ವೆ ನಂ.26/2 ರ ಆಸ್ತಿಯನ್ನು 2004-05 ರಲ್ಲಿ ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿಯು ನಾನು 1990 ರಲ್ಲಿ ಭಾಗ ಆಗಿದ್ದು ಅದನ್ನು ನನ್ನ ಸ್ವಂತ ಆಸ್ತಿ ಎಂದು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಯಾವುದೇ ಭಾಗ ಆಗದಿದ್ದರೂ ಸಹ ಬಸವರಾಜು ಮತ್ತು ನನ್ನ ಹೆಸರಿಗೆ ಒಟ್ಟು ಕುಟುಂಬದ ಆಸ್ತಿ ಎಂದು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಮೋಸ ಮಾಡಲು 1990 ರಲ್ಲಿ ಭಾಗ ಆಗಿದೆ ಎಂದು ಸುಳ್ಳು ದಾಖಲಾತಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

14. 4 ನೇ ಪ್ರತಿವಾದಿ ಬಸವರಾಜು ತಾಲ್ಲೂಕು ಪಂಚಾಯತಿಯ ಸದಸ್ಯರಾಗಿದ್ದರು ಎಂದರೆ ಸರಿ. ಅವರಿಗೆ ಪ್ರಾಪಂಚಿಕ ಮತ್ತು ವ್ಯವಹಾರಿಕ ಜ್ಞಾನ ಚೆನ್ನಾಗಿ ಗೊತ್ತಿತ್ತು ಎಂದರೆ ಸರಿ. ನನ್ನ ತಂದೆಯು ಸ್ವತಂತ್ರ್ಯ ಹೋರಾಟರಾಗಿದ್ದ ಕಾರಣ ಅವರ ಹೆಸರಿಗೆ ನ್ಯಾಯಾಬೆಲೆ ಅಂಗಡಿ ಮಂಜೂರಾಗಿದ್ದು ಬಸವರಾಜು ರವರು ಬುದ್ಧಿವಂತರಾದ ಕಾರಣ ಅವರೇ ನಡೆಸುತ್ತಿದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**